ಅಸಲು ದಾವೆ ನಂ.45/2024

ಪಿ.ಡಬ್ಲೂಃ 1

ದಿನಾಂಕಃ 28/08/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಜಿ.ಕೆ.ಎಂ. ವಕೀಲರಿಂದ**

1. ಈ ದಾವೆಯನ್ನು ನಾನು ಪ್ರತಿವಾದಿಯವರು ನನಗೆ ಹಣ ಕೊಡಬೇಕು ಎಂದು ದಾಖಲಿಸಿರುತ್ತೇನೆ. ಪ್ರತಿವಾದಿಯವರು ತನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವ ವಿಷಯದ ಬಗ್ಗೆ ಹೇಳಲು ನನಗೆ ಗೊತ್ತಿಲ್ಲ. ಡಿಸೆಂಬರ್ 2022 ರಲ್ಲಿ ಪ್ರತಿವಾದಿಯವರು ನನ್ನ ಬಳಿ ಬಂದು ಸಾಲವನ್ನು ಕೇಳಿ ಪಡೆದುಕೊಂಡಿರುತ್ತಾರೆ. ನಾನು ಮನೆಯಲ್ಲಿ ಇದ್ದಂತಹ ಹಣವನ್ನೇ ಪ್ರತಿವಾದಿಯವರಿಗೆ ಕೊಟ್ಟಿರುತ್ತೇನೆ. ಪ್ರತಿವಾದಿ ತನ್ನ ನಾದನಿಯಾ ಶಸ್ತ್ರ ಚಿಕಿತ್ಸೆಗಾಗಿ ಹಣ ಬೇಕಾಗಿರುತ್ತದೆ ಎಂದು ಹೇಳಿ ನನ್ನಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ. ಪ್ರತಿವಾದಿ ತನ್ನ ನಾದನಿಯಾ ಶಸ್ತ್ರ ಚಿಕಿತ್ಸೆಗಾಗಿ ಹಣವನ್ನು ಕೇಳಿದ್ದ ಬಗ್ಗೆ ವಾದ ಪತ್ರದಲ್ಲಿ ಅಥವಾ ನಿಪಿ-2 ರಲ್ಲಿ ತಿಳಿಸಿರುವುದಿಲ್ಲ.

2. ನಾನು ಪ್ರತಿವಾದಿಗೆ ಹಣವನ್ನು ಕೊಡುವ ದಿನದಂದು ರಾಮಪ್ಪ ಮತ್ತು ಪುಷ್ಪಾವತಿರವರು ಇದ್ದರು. ಸದರಿ ರಾಮಪ್ಪ ಮತ್ತು ಪುಷ್ಪಾವತಿಯವರನ್ನು ಸಾಕ್ಷಿದಾರರಾಗಿ ಸಹಿ ಮಾಡಿರುವ ಸಲುವಾಗಿ ನಾನೇ ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತೇನೆ.

3. ನಾನು ಆದಾಯ ತೆರಿಗೆಯನ್ನು ಪಾವತಿಸಿರುತ್ತೇನೆ. ನಾನು ಆದಾಯ ತೆರಿಗೆಯನ್ನು ಪಾವತಿಸುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಾಮಾನ್ಯವಾಗಿ ರೂ.25,000/- ಕ್ಕಿಂತ ಹೆಚ್ಚಿನ ಹಣವನ್ನು ಕೊಡಬೇಕಾದರೆ ಚೆಕ್ಕಿನ ಮುಖಾಂತರ ಕೊಡಬೇಕು ಎಂಬ ನಿಯಮದ ಬಗ್ಗೆ ಗೊತ್ತಿದ್ದೆ. ಸಾಕ್ಷಿ ಮುಂದುವರೆದು ನಾನು ಮನೆಯಲ್ಲಿ ಇದ್ದ ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಲೈಸೆನ್ಸ್ ಮತ್ತು ಲೆಡ್ಜರ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯವರು ನನ್ನಲ್ಲಿ ಹಲವು ಬಾರಿ ಸಾಲವನ್ನು ಪಡೆದುಕೊಂಡಿರುತ್ತಾರೆ. ನಾನು ರೂ.20,000/-, ರೂ.50,000/- ಗಳಂತೆ ಸಾಲವನ್ನು ಕೊಟ್ಟಾಗ ಪ್ರತಿವಾದಿಯವರಿಂದ ಭದ್ರತೆಗಾಗಿ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಆ ರೀತಿಯಾಗಿ 2021 ಮತ್ತು 2022 ರಲ್ಲೂ ಕೂಡ ನನ್ನಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ.

4. ಪ್ರತಿವಾದಿ ನನ್ನ ಬಳಿ ಹಾಕಿದ್ದಂತಹ ಗುಂಪಿನ ಚೀಟಿಯಲ್ಲಿ ಕೂಡ ಹಣವನ್ನು ಕೊಟ್ಟಿರುವುದಿಲ್ಲ. ಸದರಿ ಗುಂಪಿನ ಚೀಟಿ ರೂ.60,000/- ಗೆ ಸಂಬಂಧಿಸಿದ ಚೀಟಿಯಾಗಿರುತ್ತದೆ. ಪ್ರತಿವಾದಿ ಟೈಲರಿಂಗ್ ಕೆಲಸ ಮಾಡುತ್ತಾರೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿಯ ಗಂಡ ಲೇವಾದೇವಿ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ ಮತ್ತು ಆಕೆಯ ಗಂಡನ ಬಳಿ ಸುಮಾರು ಮನೆ ಇದೆ ಮತ್ತು ಅವುಗಳನ್ನು ಬಾಡಿಗೆಗೆ ಕೊಟ್ಟಿರುತ್ತಾರೆ

ಎಂದರೆ ಸರಿ. ಪ್ರತಿವಾದಿಯವರಿಗೆ ತಿಂಗಳಿಗೆ ರೂ.1,00,000/-ಗಳಿಗೆ ಆದಾಯ ಇದೆ ಎಂದರೆ ಸರಿ. ಪ್ರತಿವಾದಿಯವರಿಗೆ ಸಾಕಷ್ಟು ಆದಾಯ ಇರುವುದರಿಂದ ಅವರು ನನ್ನ ಬಳಿ ಸಾಲವನ್ನು ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ತುರ್ತು ಆಸ್ಪತ್ರೆಯ ಖರ್ಚಿಗಾಗಿ ಹಣ ಬೇಕಾಗಿರುತ್ತದೆ ಎಂದು ಹೇಳಿ ನನ್ನಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

5. ನಿಪಿ-1 ದಾಖಲೆಯನ್ನು ವಕೀಲರಾದಂತಹ ಪ್ರೀತಿ ಎಂಬುವವರು ಬರೆದಿರುತ್ತಾರೆ. ನಿಪಿ-1 ದಾಖಲೆಯನ್ನು ಬರೆಯಲು ಪ್ರತಿವಾದಿ ಮಾಹಿತಿಯನ್ನು ಕೊಟ್ಟಿರುತ್ತಾರೆ. ನಿಪಿ-1 ದಾಖಲೆಯನ್ನು ನಾನು ಪ್ರತಿವಾದಿಗೆ ಹಣವನ್ನು ಕೊಡುವ ದಿನದಂದೇ ಬರೆಯಲಾಗಿರುತ್ತದೆ. ನಿಪಿ-1 ದಾಖಲೆಯನ್ನು ಡಿಸೆಂಬರ್ 2022 ರಲ್ಲಿ ಬರೆಯಲಾಗಿರುತ್ತದೆ ದಿನಾಂಕ ಹೇಳಲು ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಾನು ನಿಪಿ-1 ನ್ನು ಬಡ್ಡಿಗಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ನಿಪಿ-6 ರಲ್ಲಿ ನಾನು ಪ್ರತಿವಾದಿ ಚೀಟಿ ವ್ಯವಹಾರದ ರೂ.20,000/- ಬಾಕಿ ಕೊಡಬೇಕು ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ದೂರಿನಲ್ಲಿ ಪ್ರತಿವಾದಿ ನನಗೆ ರೂ.5,00,000/- ಸಾಲವನ್ನು ಮರುಪಾವತಿ ಮಾಡಬೇಕು ಎಂದು ಕೂಡ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಇರುವ ಸಹಿ ಪ್ರತಿವಾದಿಯ ಸಹಿಯಾಗಿರುತ್ತದೆ. ನಿಪಿ-1 ರಲ್ಲಿ ಇರುವ ಸಹಿಗೂ ಮತ್ತು ಲಿಖಿತ ಹೇಳಿಕೆಯಲ್ಲಿರುವ ಪ್ರತಿವಾದಿಯ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಪ್ರತಿವಾದಿ ಸಹಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್